ಸೆಳೆಯುತ್ತಾನೆ. ಇದೀಗ ಮದುವೆಯ ವಿಶೇಷ ದಿನಕ್ಕಾಗಿಯೇ 'ಉಡುಪಿಗೆ ತಕ್ಕ ಒಡವೆ' ಪರಿಕಲ್ಪನೆಯನ್ನೂ ವಜ್ರದ ಒಡವೆ ವರ್ತಕರು ಸಾಕಾರಗೊಳಿಸಿದ್ದಾರೆ. ವಜ್ರದ ಹರಳಿನಲ್ಲಿ ಕಲರ್ ಡೈಮಂಡ್‌ಗಳು ಉಡುಪಿಗೆ ಮಿಕ್ಸ್ ಅಂಡ್ ಮ್ಯಾಚ್ ಮಾಡುವಲ್ಲಿ ಸಹಕರಿಸುತ್ತಿವೆ. ಮದುವಣಗಿತ್ತಿಯ ಅಲಂಕಾರ ಮತ್ತಷ್ಟು ಕಳೆಗಟ್ಟುವುದು ಇಂತಹ ವಿಶೇಷ ಆಭರಣಗಳನ್ನು ತೊಟ್ಟಾಗಲೇ.

ವಿದೇಶಗಳಲ್ಲಿ ನಡೆಯುವ ಮದುವೆಗಳಲ್ಲಿ ಹಾಗೂ ಎಂಗೇಜ್‌ಮೆಂಟ್‌ಗಳಲ್ಲಿ ಕೂಡ ವಜ್ರದ ಹರಳಿನ ಒಡವೆಗಳಿಗೇ ಹೆಚ್ಚಿನ ಆದ್ಯತೆ. ಧರಿಸುವುದು ಒಂದೇ ಉಂಗುರ ಆಗಿದ್ದರೂ ಅದು ವಜ್ರದಿಂದಲೇ ಮಾಡಿದ್ದಾಗಿರಬೇಕು ಹಾಗೂ ಮನದನ್ನೆಗೆ ಕೂಡ ಅದೇ ತರದ ವಜ್ರದ ಹರಳಿನ ಉಂಗುರವನ್ನೇ ಉಡುಗೊರೆಯಾಗಿ ನೀಡಬೇಕು ಎಂಬುದು ಅಲ್ಲಿನ ಅಲಿಖಿತ ನಿಯಮವೇ ಆಗಿದೆ.

ನಮ್ಮಲ್ಲಿ ಮಹಿಳೆಯರಲ್ಲಿ ಒಡವೆಗಳ ಸಂಗ್ರಹ ಎಷ್ಟೇ ಇದ್ದರೂ 'ಮದುವೆ ದಿನ' ಧರಿಸುವುದಕ್ಕಾಗಿ ವಿಶೇಷವಾಗಿ ವಜ್ರದ ಒಡವೆಗಳನ್ನೇ ಖರೀದಿಸುತ್ತಾರೆ. ಸಾಮಾನ್ಯವಾಗಿ ಉತ್ತರ ಭಾರತೀಯರು ದಕ್ಷಿಣ ಭಾರತೀಯ ಶೈಲಿಯ ಒಡವೆಗಳನ್ನು ಇಷ್ಟಪಡುತ್ತಿದ್ದಾರೆ. ದಕ್ಷಿಣ ಭಾರತೀಯ ಯುವತಿಯರು 'ಮಾಂಗ್ಟೀಕಾ'ದಂತಹ ಒಡವೆಗೆ ಆದ್ಯತೆ ನೀಡುತ್ತಿದ್ದು ಮದುವೆಯ ದಿನ ಇದು ಸಖತ್ ಲುಕ್ ಕೊಡುತ್ತಿದೆ.



## ಏನಿದು ಸ್ಪಾರ್ಕ್ಲಿಂಗ್ ಡೈಮಂಡ್?

ಸ್ಪಾರ್ಕ್ಲಿಂಗ್ ಡೈಮಂಡ್ ಮದುಮಗಳಿಗಾಗಿಯೇ ವಿಶೇಷವಾಗಿ ವಿನ್ಯಾಸಗೊಳಿಸಿದ ಅತ್ಯಂತ ಹೊಳಪು ಇರುವ ಒಡವೆಗಳ ಸೆಟ್. ಈ ಒಡವೆ ಸೆಟ್‌ನಲ್ಲಿ ನೆಕ್ಲೇಸ್, ಜುಮ್ಕಾ, ಉಂಗುರಗಳಿದ್ದು, ವಜ್ರ ಮತ್ತು ಎಮರಾಲ್ಡ್‌ಗಳಲ್ಲಿ ವಿನ್ಯಾಸಗೊಳಿಸಲಾಗಿರುತ್ತದೆ. ಇದೊಂದು ಕ್ಲಾಸಿಕ್ ಫ್ಯಾಷನ್ ಆಗಿದ್ದು, ಮದುವೆಯಲ್ಲಿ ಉಡುವ ಅದ್ದೂರಿ ರೇಷ್ಮೆಸೀರೆಗಳಿಗೆ ಅತ್ಯಂತ ಸೂಕ್ತವಾದ ಆಭರಣ ಇದು.

ಮದುಮಗಳಿಗಾಗಿಯೇ ಇದೀಗ ವಜ್ರದಲ್ಲಿ ಸ್ಟೇಟ್‌ಮೆಂಟ್ ಪೀಸ್ ಆಭರಣಗಳೂ ಲಭ್ಯ. ಇದರಲ್ಲಿ ತೋಳ್ಬಂದಿ ಹಾಗೂ ಹೊಳಪುಳ್ಳ ಹರಳುಗಳಿಂದ ಕೂಡಿದ ಸೊಂಟದ ಪಟ್ಟಿ ಸೇರಿದೆ. ಇವೆರಡೂ ಮದುಮಗಳಿಗೆ ವಿಶಿಷ್ಟ ಲುಕ್ ಕೊಡುತ್ತದೆ.

## ವಜ್ರಾಭರಣ ಕೊಳ್ಳುವ ಮುನ್ನ...

ಇದೀಗ ವಜ್ರಾಭರಣಗಳಲ್ಲಿ ಹತ್ತು ಹಲವು ವೈವಿಧ್ಯಗಳು, ಗುಣಮಟ್ಟದವು ಬಂದಿವೆ. ಖರೀದಿಸುವಾಗ ಬ್ರ್ಯಾಂಡ್ ಇರುವ ಆಭರಣವನ್ನೇ ಆಯ್ಕೆ ಮಾಡಿಕೊಳ್ಳಿ. ವಜ್ರದ ಆಭರಣದ ಮೇಲೆ 'ಪ್ರಮಾಣೀಕೃತ' (ಸರ್ಟಿಫೈಡ್) ಎಂಬ ಮುದ್ರೆ ಇರುತ್ತದೆ. ಅದನ್ನೇ ಖರೀದಿಸುವುದು ಸೂಕ್ತ. ವಜ್ರದ ಒಡವೆ ಬೆಲೆ ನಿರ್ಧಾರವಾಗುವುದು ವಜ್ರದ ಪ್ರಮುಖ ನಾಲ್ಕು ಅಂಶಗಳಿಂದ. ಕಟ್, ಕಲರ್, ಕ್ಲ್ಯಾರಿಟಿ ಮತ್ತು ಕ್ಯಾರಟ್ (4 C.). ಈ ನಾಲ್ಕೂ ಪ್ರಮುಖ ಅಂಶಗಳ ಮೇಲೆಯೇ ವಜ್ರಕ್ಕೆ ಪ್ರಮಾಣಪತ್ರ ಕೊಡಲಾಗುತ್ತದೆ. ಈ ಅಂಶಗಳ ಆಧಾರದ ಮೇಲೆಯೇ ಬೆಲೆಯೂ ನಿಗದಿಯಾಗುತ್ತದೆ. ಈ ಕಾರಣಕ್ಕಾಗಿಯೇ ವಜ್ರದ ನಿಖರತೆ ಮತ್ತು ಬೆಲೆಯಲ್ಲಿ ಮಳಿಗೆಯಿಂದ ಮಳಿಗೆಗೆ ವ್ಯತ್ಯಾಸವಿರುತ್ತದೆ.

## ಸಾಂಪ್ರದಾಯಿಕತೆಗೆ ಆಧುನಿಕ ಟಚ್

'ಅನಾದಿ ಕಾಲದಿಂದಲೂ ಸಂಪ್ರದಾಯಬದ್ಧವಾಗಿ ಧರಿಸಿಕೊಂಡು ಬರುತ್ತಿದ್ದ ಒಡವೆಗಳಿಗೆ ಇದೀಗ ಆಧುನಿಕ ಸ್ಪರ್ಶ ನೀಡಲಾಗಿದೆ. ಪಾರಂಪರಿಕ ಆಭರಣಗಳು ಮತ್ತೆ ಫ್ಯಾಷನ್ ಆಗಿದೆ. 'ಓಲ್ಡ್ ಈಸ್ ಗೋಲ್ಡ್' ಎಂಬ ಮಾತು ಅಕ್ಷರಶಃ ಫ್ಯಾಷನ್ ಜಗತ್ತಿನಲ್ಲಿ 'ಓಲ್ಡ್ ಈಸ್ ಎಕ್ಸಲೆಂಟ್' ಆಗಿದೆ. ಚಿನ್ನದ ಮೇಲೆ ರೋಸ್‌ಕಟ್ ಡೈಮಂಡ್ ಮತ್ತು ರೂಬಿ, ಹವಳ ಅಳವಡಿಸಿದ ಒಡವೆ ಮದುಮಗಳಿಗೆ ಹೇಳಿ ಮಾಡಿಸಿದಂತಿದೆ. ಇದು ಆಧುನಿಕ ಉಡುಪುಗಳಿಗೂ ಚೆನ್ನಾಗಿ ಹೊಂದುತ್ತದೆ' ಎಂದು ಹೇಳುತ್ತಾರೆ ಕೀರ್ತಿಲಾಲ್ಸ್ ಆಭರಣ ಮಳಿಗೆಯಲ್ಲಿ ವಿನ್ಯಾಸ ವಿಭಾಗದ ನಿರ್ದೇಶಕಿಯಾಗಿರುವ ಸೀಮಾ ಮೆಹ್ತಾ.



'ಮದುಮಗಳು ವಜ್ರದ ಸೆಟ್ ಅನ್ನೇ ಹೆಚ್ಚಾಗಿ ಇಷ್ಟಪಡುತ್ತಾಳೆ. ಇದಕ್ಕಾಗಿ ಮದುಮಗಳಿಗೆ ಸೂಕ್ತವಾಗುವ ಎಲ್ಲ ವೈವಿಧ್ಯಗಳ ಒಡವೆಗಳನ್ನು ವಿನ್ಯಾಸ ಮಾಡಿದ್ದೇವೆ. ಕೆಲವು ಗ್ರಾಹಕರು ಇಂಥದ್ದೇ ವಿನ್ಯಾಸ ಬೇಕು ಎಂದು ಮಳಿಗೆಗೆ ಬಂದು ಆರ್ಡರ್ ಕೊಟ್ಟು ಹೋಗುತ್ತಾರೆ. ಇಂಥ ಗ್ರಾಹಕರ ಬೇಡಿಕೆಗೆ ಯಾವತ್ತೂ ಮೊದಲ ಆದ್ಯತೆಯನ್ನೇ ನೀಡುತ್ತಿದ್ದೇವೆ' ಎನ್ನುತ್ತಾರೆ ಸೀಮಾ.

'ಉತ್ತರ ಭಾರತೀಯರಿಗಿಂತ ಹೆಚ್ಚು ದಕ್ಷಿಣ ಭಾರತೀಯರಿಂದ ವಜ್ರದ ಆಭರಣಗಳಿಗೆ ಬೇಡಿಕೆ ಹೆಚ್ಚು. ಕರ್ನಾಟಕ ಸೇರಿದಂತೆ ಆಂಧ್ರಪ್ರದೇಶ, ತೆಲಂಗಾಣ, ತಮಿಳುನಾಡು, ಕೇರಳ ರಾಜ್ಯಗಳ ಮಹಿಳೆಯರು ವಜ್ರದ ಆಭರಣಗಳನ್ನು ಖರೀದಿಸುವಲ್ಲಿ ಮುಂಚೂಣಿಯಲ್ಲಿದ್ದಾರೆ' ಎಂದು ವಿವರ ನೀಡುತ್ತಾರೆ ಅವರು.

## ಜನಸಾಮಾನ್ಯರೂ ಖರೀದಿಸಬಹುದು...

ವಜ್ರ ಎಂದರೆ ಅದು 'ಕೈಗೆಟುಕದ ನಕ್ಷತ್ರ' ಎಂದು ಮಧ್ಯಮ ವರ್ಗದ ಮಹಿಳೆಯರು ಭಾವಿಸಿದ ಕಾಲ ಈಗ ಔಟ್‌ಡೇಟೆಡ್ ಆಗಿದೆ. ಇದೀಗ ಮಧ್ಯಮ ವರ್ಗದ ಮಹಿಳೆಯರು ಕೂಡ ವಜ್ರದ ಒಡವೆಗಳನ್ನು ಖರೀದಿಸಿ ತೃಪ್ತಿ ಪಟ್ಟುಕೊಳ್ಳಬಹುದು. ಇವರಿಗಾಗಿಯೇ ಕೆಲವು ಆಭರಣ ಮಳಿಗೆಗಳು ಹಗುರವಾದ ಮತ್ತು ಎಲಿಗೆಂಟ್ ಲುಕ್ ಕೊಡುವ ಆಭರಣಗಳನ್ನು ತಯಾರಿಸಿದ್ದಾರೆ.

ಅನ್‌ಕಟ್ ಡೈಮಂಡ್ ಆಭರಣಗಳೂ ಜನಪ್ರಿಯವಾಗುತ್ತಿವೆ. ಈ ಆಭರಣ ಶ್ರೇಣಿಯಡಿ, ನೆಕ್ಲೇಸ್, ಕಿವಿಯೋಲೆ, ಬಳೆಗಳು ಲಭ್ಯ. ಈ ಸಂಗ್ರಹವು ವಧುವಿನ ವೈಭವಕ್ಕೆ ಸರಿ ಹೊಂದುವಂತಿದೆ. ಮದುವೆ, ಮುಂಜಿಗಳಂತಹ ಅದ್ದೂರಿಯ ಸಂದರ್ಭಗಳಲ್ಲಿ ಧರಿಸಲೂ ಸೂಕ್ತವಾಗಿವೆ.

ಬೆಂಗಳೂರಿನ ಕೆಲವು ಪ್ರಮುಖ ಆಭರಣ ಮಳಿಗೆಗಳು ವೈವಿಧ್ಯಮಯ ವಿನ್ಯಾಸಗಳ ವಜ್ರದ ಆಭರಣಗಳನ್ನು ಮದುಮಗಳ ಅಲಂಕಾರಕ್ಕಾಗಿಯೇ ವಿನ್ಯಾಸಗೊಳಿಸುತ್ತಿವೆ. ಕಡಿಮೆ ಬೆಲೆಯಲ್ಲಿ, ಗುಣಮಟ್ಟಕ್ಕೆ ಕೊಂಚವೂ ಧಕ್ಕೆಯಾಗದಂತೆ ತಯಾರಿಸಿದ ಇಂಥ ಒಡವೆಗಳು 'ವಜ್ರದ ಒಡವೆ'ಯನ್ನು ತಿಜೋರಿಗೆ ತುಂಬಿಸಿ ಸಂತೃಪ್ತಿಪಟ್ಟುಕೊಳ್ಳಬೇಕು ಎಂಬ ಮಹಿಳೆಯರಿಗೆ ಸೂಕ್ತವಾದವು. ■